ಅ.ದಾ. 54/2021 ಡಿಡಬ್ಲ್ಯೂ-1

ದಿನಾಂಕಃ 04.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:**

ನನ್ನ ವಾಸದ ಮನೆಯ ಖಾತೆಯು 85 ಎಂದರೆ ಸರಿ. ನನ್ನ ಸಹೋದರ ದುಗ್ಗಯ್ಯ ರವರ ಮನೆಯ ಖಾತೆಯ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ನಮ್ಮ ಮನೆಯ ವಿದ್ಯುತ್ ಸಂಪರ್ಕದ ದಾಖಲಾತಿಗಳು ಸಿದ್ದಯ್ಯ ಎಂಬುವವರ ಹೆಸರಿನಲ್ಲಿಯೇ ಇರುತ್ತದೆ ಎಂದರೆ ಸರಿ. ನಮ್ಮ ಕುಟುಂಬದ ಪಡಿತರ ಚೀಟಿಯಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ಪಡಿತರ ಚೀಟಿಯಲ್ಲಿ ನನ್ನನ್ನು ಮತ್ತು ನನ್ನ ಮಕ್ಕಳನ್ನು ಸದಸ್ಯರನ್ನಾಗಿ ತೋರಿಸಲಾಗಿರುತ್ತದೆ ಎಂದರೆ ಸರಿ. ವಾದಿಯವರ ಕುಟುಂಬದ ಪಡಿತರ ಚೀಟಿಯು ವಾದಿಯವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ಪಡಿತರ ಚೀಟಿಯಲ್ಲಿ ವಾದಿಯ ಗಂಡ ಮತ್ತು ಅವರ ಮಕ್ಕಳನ್ನು ಸದಸ್ಯರನ್ನಾಗಿ ಸೇರಿಸಲಾಗಿರುತ್ತದೆ ಎಂದರೆ ಸರಿ. ನನ್ನ ತಾಯಿ ಸುಬ್ಬಮ್ಮ ದಿ.28.12.2021 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಸಿದ್ದಯ್ಯ ಮರಣ ಹೊಂದಿದ ದಿನಾಂಕ ನೆನಪಾಗುತ್ತಿಲ್ಲ. ನನ್ನ ತಂದೆಯವರು ದಿ.20.05.2000 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಚಿಕ್ಕವಯಸ್ಸಿನಲ್ಲಿರುವಾಗ ನನ್ನ ತಂದೆಯು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮನೆಯು ನನ್ನ, ನನ್ನ ತಂದೆ ಅಥವಾ ತಾಯಿಯ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಅಂಗಡಿಯನ್ನು ನಡೆಸಲು ಹೊಂದಿರುವ ಪರವಾನಿಗೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ಪರವಾನಿಗೆಯಲ್ಲಿ ಕಟ್ಟಡದ ಅಸೆಸ್ ಮೆಂಟ್ ನಂಬರ್ ನ್ನು ನಮೂದಿಸಲಾಗಿರುತ್ತದೆ. ಸದರಿ ಅಸೆಸ್ ಮೆಂಟ್ ನಂಬರ್ ನನ್ನ ಹೆಸರಿನಲ್ಲಿಯೇ ಇರುತ್ತದೆ. ಸರ್ಕಾರಿ ಜಮೀನನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ವಾದಿಯನ್ನು ಮದುವೆಯಾಗುವ ಪೂರ್ವದಲ್ಲಿ ನನ್ನ ಸಹೋದರ ರುದ್ರೇಶ್ ಒಂದು ಗುಡಿಸಲಿನಲ್ಲಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಗುಡಿಸಲಿನಲ್ಲಿ ರುದ್ರೇಶ್ ರವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ನಮಗೆ ಮದುವೆಯಾದ ಕಾರಣ ರುದ್ರೇಶ್ ರವರು ನಮ್ಮೊಟ್ಟಿಗೆ ಇರಲಿಲ್ಲ ಎಂದರೆ ಸರಿಯಲ್ಲ. ರುದ್ರೇಶ್ ರವರು 2012 ನೇ ಸಾಲಿನಲ್ಲಿ ಮದುವೆಯಾಗಿರುತ್ತಾರೆ. ಮದುವೆಯಾದ ನಂತರದಲ್ಲಿ ರುದ್ರೇಶ್ ರವರು ವಾದಿಯೊಟ್ಟಿಗೆ ಗುಡಿಸಲನ್ನು ರಿಪೇರಿ ಮಾಡಿಕೊಂಡು ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ರುದ್ರೇಶ್ ರವರು ಸರಿ ಮಾಡಿಸಿಕೊಂಡ ಗುಡಿಸಲೇ ದಾವಾ ಸ್ವತ್ತು ಎಂದರೆ ಸರಿಯಲ್ಲ. ಅಕ್ರಮ ಸಕ್ರಮ ದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ರುದ್ರೇಶ್ ರವರು ವಾದಿಯವರ ಹೆಸರಿನಲ್ಲಿ ಮನೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ನಂತರದಲ್ಲಿ ವಾದಿಯವರಿಗೆ ಮನೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಅರ್ಜಿಯನ್ನು ನೀಡುವಾಗ ವಾದಿಯವರು ರುದ್ರೇಶ್ ರವರು ಮದುವೆ ಪೂರ್ವದಿಂದ ವಾಸವಿದ್ದ ಅವಧಿಯನ್ನು ಸೇರಿಸಿ ಒಟ್ಟಿಗೆ 10 ವರ್ಷದಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನ ಇರುತ್ತೇವೆ ಎಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯವರಿಗೆ ಮಂಜೂರಾಗಿರುವ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಮನೆಯ ಪಕ್ಕದಲ್ಲಿರುವ ಶೆಡ್ ನಲ್ಲಿ ನನ್ನ ಟಿಲ್ಲರ್ ನ್ನು ನಿಲ್ಲಿಸಲು ಅವರ ಬಳಿ ಕೇಳಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ವಾದಿಯವರು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ವಾದಿಯವರ ವಿರುದ್ಧ ನನಗೆ ವೈಶಮ್ಯ ಇದೆ ಎಂದರೆ ಸರಿಯಲ್ಲ. ನಾನು ಬ್ಯಾಂಕ್ ನಲ್ಲಿ ಸಾಲ ಪಡೆದು ವಾದಿಯವರನ್ನು ಜಾಮೀನುದಾರರನ್ನಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಮೂಡಿಗೆರೆ ಬ್ಯಾಂಕ್ ನಿಂದ ನೋಟೀಸನ್ನು ಜಾರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಸಾಲ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸಾಲ ಪಡೆದು ವಾದಿಯನ್ನು ಜಾಮೀನುದಾರರಾಗಿ ತೋರಿಸಿದ ಬಾಬ್ತು ನನ್ನನ್ನು ಪ್ರಶ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ವಾದಿಯವರ ಮೇಲೆ ನನಗೆ ಅಂದಿನಿಂದ ವೈಶಮ್ಯ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮೊದಲನೇ ಪತ್ನಿ ನನ್ನ ವಿರುದ್ಧ ಒಂದು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ರುದ್ರೇಶ್ ರವರು ನನಗೆ ಜಾಮೀನನ್ನು ನೀಡಿ ಸಹಾಯ ಮಾಡಿರುವುದಿಲ್ಲ ಎಂದು ನನಗೆ ದ್ವೇಶ ಇರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣದಿಂದ ವಾದಿಯವರಿಗೆ ತೊಂದರೆ ಮಾಡುವ ಉದ್ದೇಶದಿಂದ ದಿ.03.03.2021 ರಂದು ವಾದಿಯವರು ಜಮೀನಿನ ಬೇಲಿಯನ್ನು ತೆಗೆದು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡಿದ ನಂತರ ವಾದಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ವಾದಿಗೆ ಮಂಜೂರಾಗಿರುವ ಮನೆಯು ಸರಿ ಇರುವುದಿಲ್ಲ ಎಂದು ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಅದು ಒಟ್ಟು ಕುಟುಂಬದಲ್ಲಿ ಇರುವಾಗ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯಲ್ಲಿ ಕಳೆದ 6 ವರ್ಷದ ಹಿಂದೆ ವಾದಿಯು ಮದುವೆಯಾಗಿರುತ್ತಾರೆ ಆದರೆ ದಾವಾ ಸ್ವತ್ತಿನಲ್ಲಿ 10 ವರ್ಷದಿಂದ ಸ್ವಾಧೀನಾನುಭವದಲ್ಲಿರುತ್ತೇನೆ ಎಂದು ಸುಳ್ಳಾಗಿ ಪ್ರತಿಪಾದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ರೀತಿಯಾಗಿ ತಪ್ಪು ಮಾಹಿತಿಯನ್ನು ಉಪ-ವಿಭಾಗಾಧಿಕಾರಿಯವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಮೇಲ್ಮನವಿಯಲ್ಲಿ ವಾದಿಯಾಗಲೀ, ರುದ್ರೇಶ್ ಆಗಲೀ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ವಾದಿ ಮತ್ತು ರುದ್ರೇಶ್ ರವರಿಗೆ ನೋಟೀಸ್ ಜಾರಿಯಾಗದಂತೆ ನಾನು ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿಯವರ ಗಮನಕ್ಕೆ ಮೇಲ್ಮನವಿಯ ಬಗ್ಗೆ ತಾರದೆ ಏಕಪಕ್ಷೀಯ ಆದೇಶವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯು ಒಟ್ಟು ಕುಟುಂಬದ ಸ್ವತ್ತು ಎಂಬ ಕಾರಣ ನೀಡಿ ವಜಾ ಮಾಡಲಾಗಿರುತ್ತದೆ. ಸದರಿ ಮೇಲ್ಮನವಿಯಲ್ಲಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ಮೇಲ್ಮನವಿಯನ್ನು ಹೆಚ್ಚಿನ ಕಾಲದ ಅನುಭವ ತೋರಸಲಾಗಿರುತ್ತದೆ ಎಂಬ ಕಾರಣದಿಂದ ವಜಾ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ

ಮೇಲ್ಮನವಿಯಲ್ಲಿ ಪುನರ್ ವಿಚಾರಣೆ ಮಾಡಬೇಕು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣವು ಈಗಲೂ ಸಹಾ ವಿಚಾರಣೆಗೆಂದು ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ಪ್ರಸುತ್ತ ದಾವೆಯು ಚಾಲ್ತಿಯಲ್ಲಿರುವ ಕಾರಣ ಸದರಿ ಪ್ರಕರಣವನ್ನು ವಿಚಾರಣೆಗೆಂದು ಕೈಗೆತ್ತಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯು ಇಂದಿಗೂ ಸಹಾ ವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸದರಿಯವರೇ ಕಂದಾಯವನ್ನು ಪಾವತಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ವಾದಿಯವರ ಹೆಸರಿಗೆ ಇರುವ ಖಾತೆಯನ್ನು ವಜಾ ಮಾಡಿರುವ ಕುರಿತು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ವಾದಿ ಮತ್ತು ರುದ್ರೇಶ್ ರವರು ಒಂದೇ ಮನೆಯಲ್ಲಿ ವಾಸ ಮಾಡುತ್ತಿರುತ್ತಾರೆ ಎಂದರೆ ಸಾಕ್ಷಿಯು ನಾವೆಲ್ಲಾ ಒಟ್ಟಾಗಿ ಇರುತ್ತೇವೆ ಎಂದು ನುಡಿಯುತ್ತಾರೆ.

ವಾದಿ ಮತ್ತು ರುದ್ರೇಶ್ ರವರು ದಾವಾ ಸ್ವತ್ತಿನ ಮನೆಯಲ್ಲಿ ವಾಸಿಸುತ್ತಿರುತ್ತಾರೆ ಎಂದರೆ ನಾವೆಲ್ಲರೂ ಒಟ್ಟಿಗೆ ವಾಸಿಸುತ್ತಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಯ ಕುಟುಂಬವನ್ನು ಹೊರತುಪಡಿಸಿ ನಾವುಗಳು ವಾಸಿಸುತ್ತಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಹೆಸರಿನಿಂದ ನಮ್ಮ ಹೆಸರಿಗೆ ಜಂಟಿ ಖಾತೆಯನ್ನು ಮಾಡಬೇಕು ಎಂದು ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ವಾದಿಯ ಹೆಸರಿಗೆ ಆಗಿರುವ ಮಂಜೂರಾತಿ ಅಕ್ರಮವಾಗಿರುತ್ತದೆ ಎಂದು ವಾದಿಯನ್ನು ದಾವಾ ಸ್ವತ್ತಿನಿಂದ ಹೊರ ಹಾಕಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳು ವಾದಿಯ ಹೆಸರನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ಉಪ-ವಿಭಾಗಾಧಿಕಾರಿಯವರು ದಾವಾ ಸ್ವತ್ತು ನನಗೆ ಸೇರಿರುತ್ತದೆ ಎಂದು ಯಾವ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಮಂಜೂರಾದ ಸ್ವತ್ತನ್ನು ರದ್ದು ಮಾಡಿದ್ದಲ್ಲಿ ಸದರಿ ಸ್ವತ್ತುಗಳು ಪುನಃ ಸರ್ಕಾರಕ್ಕೆ ಹೋಗುತ್ತವೆ ಎಂದರೆ ಸರಿ. ದಾವಾ ಸ್ವತ್ತನ್ನು ನನ್ನದಾಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳಾಗಿ ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಗೆ ಸೇರಿರುತ್ತದೆ ಮತ್ತು ಸದರಿ ಸ್ವತ್ತಿನಲ್ಲಿ ನನಗೂ ಹಕ್ಕಿದೆ ಎಂದು ಸುಳ್ಳು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಸಕ್ರಮ ಮಾಡಿಸಿಕೊಳ್ಳಲು ನನ್ನ ಅಣ್ಣ ಅಥವಾ ತಾಯಿಯವರು ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯವರು ನನಗೆ ಮಾಹಿತಿ ಇಲ್ಲದೇ ದಾವಾ ಸ್ವತ್ತನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಜೂರಾತಿ ಕಡತದ ಮರು ಪರಿಶೀಲನೆ ಇಂದಿಗೂ ಸಹಾ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮಂಜೂರಾತಿ ಮರುಪರಿಶೀಲನೆ ಆಗುವ ತನಕ ವಾದಿಯವರಿಗೆ ದಾವಾ ಸ್ವತ್ತಿನಲ್ಲಿ ಇರುವ ಹಕ್ಕಿರುತ್ತದೆ ಎಂದರೆ ಸರಿಯಲ್ಲ. ಆದರೂ ಸಹಾ ವಾದಿಯವರಿಗೆ ದಾವಾ ಸ್ವತ್ತಿನಲ್ಲಿ ಇರಲು ಯಾವುದೇ ಹಕ್ಕಿರುವುದಿಲ್ಲ ಎಂದು ಸುಳ್ಳು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಂದೂ ವಾರಸುದಾರರ ಹಕ್ಕಿನ ಕಾಯ್ದೆಯ ಪ್ರಕಾರ ವಾದಿಯೇ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ. ವಾದಿಗೆ ಮಾಲೀಕತ್ವ ಮತ್ತು ಸ್ವಾಧೀನ ಆಧಾರದ ಮೇಲೆ ದಾವಾ ಸ್ವತ್ತಿನ ಮೇಲೆ ಹಕ್ಕಿದೆ ಎಂದರೆ ಸರಿಯಲ್ಲ. ವಾದಿಯವರ ಸ್ವಾಧೀನಾನುಭವಕ್ಕೆ ಕಿರುಕುಳ ಕೊಡಲು ನನಗೆ

ಯಾವುದೇ ಹಕ್ಕಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.